# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ:SHQ/Special Summer Camp/143/2026-27/ 154/2026-27. ದಿನಾಂಕ:30.04.2026

ಜಿಲ್ಲಾ ಕಾರ್ಯದರ್ಶಿಗಳಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ
ಬಳ್ಳಾರಿ, ಕೊಪ್ಪಳ, ವಿಜಯನಗರ
ಜಿಲ್ಲಾ ಸಂಸ್ಥೆ, ಕರ್ನಾಟಕ

ಮಾನ್ಯರೆ,

**ವಿಷಯ:-ವಿಶೇಷ ಬೇಸಿಗೆ ಶಿಬಿರದ ಅಡಿಯಲ್ಲಿ ಕಲ್ಯಾಣ ಕರ್ನಾಟಕ ಮಟ್ಟದ ಐತಿಹಾಸಿಕ ಸ್ಥಳಗಳ ವೀಕ್ಷಣೆ ಹಾಗೂ ಅಧ್ಯಯನ ಶಿಬಿರಕ್ಕೆ ಹಿರಿಯ ಸ್ಕೌಟ್ಸ್-ಗೈಡ್ಸ್, ರೋವರ್ಸ್ - ರೇಂಜರ್ಸ್‌ಗಳನ್ನು ನಿಯೋಜಿಸುವ ಬಗ್ಗೆ**

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಮತ್ತು ಬೀದರ್ ಜಿಲ್ಲೆಯ ಸಹಯೋಗದೊಂದಿಗೆ ಹಿರಿಯ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ ವಿಶೇಷ ಬೇಸಿಗೆ ಶಿಬಿರದ ಅಡಿಯಲ್ಲಿ ರಾಜ್ಯ **ರಾಜ್ಯ ಮಟ್ಟದ** ಐತಿಹಾಸಿಕ ಸ್ಥಳಗಳ ವೀಕ್ಷಣೆ ಹಾಗೂ ಅಧ್ಯಯನ ಶಿಬಿರವನ್ನು **ದಿನಾಂಕ:13.05.2026 ರಿಂದ 16.05.2026ರ ವರೆಗೆ** ಬಸವಗಿರಿ, ಪಾಪನಾಶ, ಶಿವನಗರ, ಬೀದರ್ ಇಲ್ಲಿ ಆಯೋಜಿಸಲಾಗಿದೆ. ವಿವರಗಳು ಕೆಳಕಂಡಂತಿವೆ.

| | |
|---|---|
| ಶಿಬಿರ | ರೋವರ್ಸ್-ರೇಂಜರ್ಸ್‌ಗಳಿಗೆ ವಿಶೇಷ ಬೇಸಿಗೆ ಶಿಬಿರದ ಅಡಿಯಲ್ಲಿ ರಾಜ್ಯ ಮಟ್ಟದ ಐತಿಹಾಸಿಕ ಸ್ಥಳಗಳ ವೀಕ್ಷಣೆ ಹಾಗೂ ಅಧ್ಯಯನ ಶಿಬಿರ |
| ದಿನಾಂಕ | ದಿನಾಂಕ:13.05.2026 ರಿಂದ 16.05.2026ರ ವರೆಗೆ |
| ವರದಿ ಮಾಡುವ ಸ್ಥಳ | ಬಸವಗಿರಿ, ಪಾಪನಾಶ, ಶಿವನಗರ, ಬೀದರ್ |
| ಹಾಜರಾಗುವ ವೇಳೆ ಮತ್ತು ದಿನಾಂಕ | ದಿನಾಂಕ:13.05.2026 ರಂದು ಬೆಳಗ್ಗೆ 9.00 ಗಂಟೆಗೆ ಕಡ್ಡಾಯವಾಗಿ ವರದಿ ಸಲ್ಲಿಸುವುದು. (ಶಿಬಿರಕ್ಕೆ ತಡವಾಗಿ ಬರುವಂತಿಲ್ಲ.) |
| ಬಿಡುಗಡೆ ಮಾಡುವ ದಿನಾಂಕ | ದಿನಾಂಕ:16.05.2026 ಮಧ್ಯಾಹ್ನ ಊಟದ ನಂತರ ಬಿಡುಗಡೆ |
| ನೊಂದಣಿ & ಶಿಬಿರ ಶುಲ್ಕ | ತಲಾ ರೂ.600/- (ರೂ ಆರುನೂರುಗಳು) |
| | |
| ತರಬೇಕಾದ ಸಾಮಾಗ್ರಿಗಳು | ಶಿಬಿರಕ್ಕೆ ಅವಶ್ಯಕವಿರುವ ಉಡುಪು ಮತ್ತು ಸಲಕರಣೆಗಳು. ಸಮವಸ್ತ್ರ, ಬದಲಿ ಉಡುಪು, ತಟ್ಟೆ, ಲೋಟೆ, ಹಗುರ ಹಾಗೂ ಬೆಚ್ಚನೆ ಹಾಸಿಗೆ, ನೂಲಿನ ಹಗ್ಗ, ಬರವಣಿಗೆ ಸಾಮಾಗ್ರಿಗಳು, ವೈಯಕ್ತಿಕ ವಸ್ತುಗಳು, ನೋಟ್ ಪುಸ್ತಕ, ಶಿಬಿರಾಗ್ನಿ ಉಡುಪು, ದೈಹಿಕ ವೈದ್ಯಕೀಯ ಪ್ರಮಾಣ ಪತ್ರ. |
| ಪ್ರತಿ ಜಿಲ್ಲೆಗೆ ನಿಗದಿಪಡಿಸಿರುವ ಕೋಟಾ | ಕಲ್ಯಾಣ ಕರ್ನಾಟಕದ ಪ್ರತಿ ಜಿಲ್ಲೆಯಿಂದ ನಿಪುಣ್ ತರಬೇತಿ ಹೊಂದಿದ 8+1 ರೋವರ್ಸ್, 8+1 ರೇಂಜರ್ಸ್ /ದಳನಾಯಕರು/ಹಿರಿಯ ಸ್ಕೌಟ್/ಗೈಡ್‌ಗಳನ್ನು ಸಹ ನಿಯೋಜಿಸುವುದು. |

| | |
|---|---|
| ಶಿಬಿರದ ವಿಶೇಷತೆಗಳು | ಬಸವಕಲ್ಯಾಣ, ಅನುಭವ ಮಂಟಪ, ಬಂದವರ ಓಣಿ ಕೋಟೆ, ಪರಶುಕಟ್ಟೆ, 108 ಅಡಿಯ ಬಸವಣ್ಣನ ಪ್ರತಿಮೆ, ಗಚ್ಚಿನ ಮಠ, ಕಂಬಳಿ ಮಠ, ಅಕ್ಕಣ್ಣ ದೇವಿ ಗುಹೆಗಳು, ಜಲಸಂಗ್ವಿ, ಪ್ರಾಚೀನ ದೇವಾಲಯದ ಶಿಲಾ ಬಾಲಿಕೆಗಳು, ಪುರಾತನ ಮಾಣಿಕ ಪ್ರಭು ದೇವಾಲಯ |
| ಪ್ರಯಾಣ ವೆಚ್ಚ | ಆಯಾಯ ಕಾಲೇಜಿನ ರೋವರ್ಸ್-ರೇಂಜರ್ಸ್/ ಶಾಲಾ ಸ್ಕೌಟ್-ಗೈಡ್ ನಿಧಿಯಿಂದ ಭರಿಸುವುದು. |
| ಊಟ ಮತ್ತು ವಸತಿ ವ್ಯವಸ್ಥೆ | ಬೀದರ್ ಜಿಲ್ಲಾ ಸಂಸ್ಥೆಯವರು ವ್ಯವಸ್ಥೆ ಮಾಡಿರುತ್ತಾರೆ |
| ಸಂಪರ್ಕಿಸಬೇಕಾದ ಸಂಖ್ಯೆ | ಶ್ರೀ ರಮೇಶ್ ತಿಬ್ಬಶಿಟ್ಟಿ, ಜಿಲ್ಲಾ ಕಾರ್ಯದರ್ಶಿ, ಬೀದರ್-9060304999<br>ಶ್ರೀಮತಿ ಸುಜಾತ ಪೂಜಾರಿ, ಡಿಒಟಿ – 8310604433<br>ಶ್ರೀ ಎಂ. ಪ್ರಭಾಕರ್ ಭಟ್, ಎಸ್.ಒ.ಸಿ - 9448914540<br>ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎಎಸ್ಒಸಿ(ಗೈ) ಮತ್ತು<br>ಕಲ್ಯಾಣ ಕರ್ನಾಟಕ ಇನ್‌ಚಾರ್ಜ್- 7259115730 |

ಭಾಗವಹಿಸುವ ರೋವರ್ಸ್-ರೋವರ್ಸ್/ಹಿರಿಯ ಸ್ಕೌಟ್ಸ್-ಗೈಡ್ಸ್ ಮತ್ತು ದಳನಾಯಕರುಗಳ ಶಿಬಿರ ಶುಲ್ಕ ಮತ್ತು ಪ್ರಯಾಣ ಭತ್ಯೆಯನ್ನು ಆಯಾಯ ಕಾಲೇಜಿನ ರೋವರ್ಸ್-ರೇಂಜರ್ಸ್/ಶಾಲಾ ಸ್ಕೌಟ್-ಗೈಡ್ ನಿಧಿಯಿಂದ ಭರಿಸುವುದು. ಆಸಕ್ತ ರೋವರ್ಸ್-ರೇಂಜರ್ಸ್/ಹಿರಿಯ ಸ್ಕೌಟ್ಸ್-ಗೈಡ್ಸ್‌ಗಳನ್ನು ಆಯ್ಕೆ ಮಾಡಿ, ಮೇಲ್ಕಂಡ ಶಿಬಿರಕ್ಕೆ ನಿಯೋಜಿಸಲು ಕೋರಲಾಗಿದೆ. ಭಾಗವಹಿಸುವವರುಗಳ ವಿವರಗಳನ್ನು ದಿನಾಂಕ: 11.05.2026ರ ಒಳಗಾಗಿ ರಾಜ್ಯ ಸಂಸ್ಥೆಗೆ ತಪ್ಪದೇ ಕಳುಹಿಸುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ.ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ

**ಪ್ರತಿ ಮಾಹಿತಿಗಾಗಿ:**

1. ರಾಜ್ಯ ಜಂಟಿ ಕಾರ್ಯದರ್ಶಿ (ಸ್ಕೌಟ್ಸ್)/(ಗೈಡ್ಸ್)
2. ಜಿಲ್ಲಾ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಬೀದರ್ ಜಿಲ್ಲೆ
3. ಎ.ಎಸ್.ಒ.ಸಿ/ಡಿಒ/ಡಿಒಸಿ/ಡಿಒಟಿ/ಎಸ್‌ಜಿವಿ/ಎಸ್‌ಜಿವಿಗಳು, ಭಾ.ಸ್ಕೌ&ಗೈ, (ಕಲ್ಯಾಣ ಕರ್ನಾಟಕ ಜಿಲ್ಲಾ ಸಂಸ್ಥೆಗಳು) ಇವರುಗಳ ಸೂಕ್ತ ಕ್ರಮಕ್ಕಾಗಿ